ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018–19 :** **ದಿನಾಂಕ : 16–07–2018**

**<u>ಪತ್ರಿಕಾ ಆಮಂತ್ರಣ</u>**

**1. ಸರ್ಕಾರಿ ಕನ್ನಡ ಮತ್ತು ತಮಿಳು ಹಿರಿಯ ಪ್ರಾಥಮಿಕ ಶಾಲೆ ನೂತನ ಶಾಲಾ ಕಟ್ಟಡ ಶಂಕುಸ್ಥಾಪನೆ ಕಾರ್ಯಕ್ರಮ:**

**ಶಂಕುಸ್ಥಾಪನೆ:**

**ಹೆಚ್.ಡಿ. ಕುಮಾರಸ್ವಾಮಿ,**
**ಮುಖ್ಯಮಂತ್ರಿಗಳು,**

**ಮುಖ್ಯ ಅತಿಥಿಗಳು:**

**ಡಾ: ಜಿ. ಪರಮೇಶ್ವರ್,**
**ಉಪ ಮುಖ್ಯಮಂತ್ರಿಗಳು,**

**ಅಧ್ಯಕ್ಷತೆ:**

**ಆರ್. ರೋಷನ್‌ಬೇಗ್,**
**ವಿಧಾನ ಸಭಾ ಸದಸ್ಯರು,**
**ಶಿವಾಜಿನಗರ ಕ್ಷೇತ್ರ**

**ದಿನಾಂಕ: 17–07–2018 ಮಂಗಳವಾರ, ಸಮಯ: ಬೆಳಿಗ್ಗೆ 9–00 ಗಂಟೆಗೆ**

**ಸ್ಥಳ: ಸರ್ಕಾರಿ ಕನ್ನಡ ಮತ್ತು ತಮಿಳು ಹಿರಿಯ ಪ್ರಾಥಮಿಕ ಶಾಲೆ, ವಸಂತನಗರ, ಬೆಂಗಳೂರು**

<u>ಪತ್ರಿಕಾ ಪ್ರಕಟಣೆ</u>

ಸಂಖ್ಯೆ668/768

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತ್ಯೇಕ ಕಾನೂನು ತರಲು ಚಿಂತನೆ : ಉಪ ಮುಖ್ಯಮಂತ್ರಿ ಡಾ ಜಿ. ಪರಮೇಶ್ವರ್

ಬೆಂಗಳೂರು, ಜುಲೈ 16 (ಕರ್ನಾಟಕ ವಾರ್ತೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರಸ್ತುತ ಇರುವ ಮುನಿಸಿಪಾಲಿಟಿ ಕಾನೂನನ್ನು ಪರಿಷ್ಕರಿಸಿ ಪ್ರತ್ಯೇಕ ಕಾನೂನು ತರಲು ಚಿಂತನೆ ನಡೆಸಲಾಗಿದೆ ಎಂದು ಗೃಹ ಹಾಗೂ ಬೆಂಗಳೂರು ಮಹಾನಗರ ಅಭಿವೃದ್ಧಿ ಖಾತೆಯನ್ನು ಹೊಂದಿರುವ ಉಪ ಮುಖ್ಯಮಂತ್ರಿ ಡಾ ಜಿ. ಪರಮೇಶ್ವರ್ ಅವರು ಇಲ್ಲಿ ಇಂದು ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಕುರಿತ ಎರಡನೇ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈಗಾಗಲೇ ರಾಜ್ಯದಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಲಾಗಿದೆ. ಆದರೂ ಪ್ಲಾಸ್ಟಿಕ್ ಉತ್ಪಾದನೆ ಮತ್ತು ಮಾರಾಟ ಅವ್ಯಾಹತವಾಗಿಯೇ ನಡೆಯುತ್ತಿದೆ. ಇಂತಹ ಪ್ರಕರಣಗಳನ್ನು ಪತ್ತೆಮಾಡಿ ಕಠಿಣ ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಡಾ. ಜಿ. ಪರಮೇಶ್ವರ್ ಅವರು ಹೇಳಿದರು.

ಬೆಂಗಳೂರು ನಗರದಲ್ಲಿ ಅನುಮತಿ ಇಲ್ಲದೆ ಎಲ್ಲೆಂದರಲ್ಲಿ ಫ್ಲೆಕ್ಸ್‌ಗಳನ್ನು ಹಾಕಲಾಗುತ್ತಿದೆ. ಅನಧಿಕೃತವಾದ ಫ್ಲೆಕ್ಸ್‌ಗಳನ್ನು ಹಾಕುವವರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ ಅವರು ನಗರದಲ್ಲಿ ಮನಬಂದಂತೆ ಕೇಬಲ್‌ಗಳನ್ನು ಅಳವಡಿಸಲಾಗಿದೆ. ಅನಧಿಕೃತ ಕೇಬಲ್‌ಗಳ ತೆರವುಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಪ್ರಕಟಿಸಿದರು.

ಕಸ ಸಂಗ್ರಹಣೆ ಹಾಗೂ ವಿಲೇವಾರಿ ಕುರಿತಂತೆಯೂ ಇಂದಿನ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಕಸದಲ್ಲಿ ವಿದ್ಯುತ್ ತಯಾರಿಸುವ ಕುರಿತಂತೆ ಪ್ರಾಯೋಗಿಕ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. ಬೆಂಗಳೂರಿನ ಎಲ್ಲಾ ಭಾಗಗಳಲ್ಲೂ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ನಿರ್ಭಯ ಯೋಜನೆಯಡಿ ರಾಜ್ಯಕ್ಕೆ 650 ಕೋಟಿ ರೂ. ಹಣ ಬಂದಿದೆ. ಈ ಹಣದಲ್ಲಿ ಬೆಂಗಳೂರಿನ ಎಲ್ಲಾ ಕಡೆ ಸುಮಾರು 5000 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ಮುಂದಿನ ವಾರದಿಂದ ನಗರದ ಎಲ್ಲಾ 28 ಕ್ಷೇತ್ರಗಳಿಗೆ ಭೇಟಿ ನೀಡುತ್ತೇನೆ. ಜನರನ್ನು ಸಂಪರ್ಕಿಸುತ್ತೇನೆ. ಸ್ಥಳೀಯ ಸಮಸ್ಯೆಗಳನ್ನು ಆಲಿಸುತ್ತೇನೆ, ಅಲ್ಲದೆ, ಪ್ರತಿದಿನ ಮೂರು-ನಾಲ್ಕು ವಿಧಾನ ಸಭಾಕ್ಷೇತ್ರಗಳಿಗೆ ಭೇಟಿ ನೀಡುತ್ತೇನೆ ಎಂದರು.

ಬೆಂಗಳೂರು ನಗರದಲ್ಲಿನ ರಸ್ತೆ ಗುಂಡಿಗಳ ಸಮಸ್ಯೆ ಹೆಚ್ಚಿದೆ ರಸ್ತೆ ಗುಂಡಿಗಳಿಗೆ ಪರಿಹಾರ ಕಂಡು ಹಿಡಿಯಲು ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭಿಸಲಾಗಿದೆ. ಒಮ್ಮೆ ಸಿಮೆಂಟ್ ರಸ್ತೆ ಆದಲ್ಲಿ ರಸ್ತೆ ಗುಂಡಿಗೆ ಶಾಶ್ವತ ಪರಿಹಾರ ಸಿಗಲಿದೆ ಎಂದ ಅವರು ನಗರದಲ್ಲಿ ಹೆಚ್ಚುತ್ತಿರುವ ಡ್ರಗ್ ಮಾಫಿಯಾ ಹತ್ತಿಕ್ಕುವ ಸಂಬಂಧ ಇಂದು ಅಧಿಕಾರಿಗಳ ಸಭೆ ಕರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಪೌರ ಕಾರ್ಮಿಕರಿಗೆ ಸಂಬಳ ನೀಡಲು ತಕ್ಷಣ ಹಣ ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ಕಾರ್ಪೋರೇಷನ್ ಮಾಡಬೇಕು ಎಂದು ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ. ಎಸ್. ಪಾಟೀಲ್ ನೇತೃತ್ವದ ಸಮಿತಿ ಈ ಹಿಂದೆ ನೀಡಿರುವ ವರದಿಯಲ್ಲಿ ತಿಳಿಸಿದೆ. ಈ ವರದಿ ಪರಿಶೀಲನಾ ಹಂತದಲ್ಲಿದೆ.

ಬೃಹತ್ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಬಾರಿ 10 ಸಾವಿರ ಕೋಟಿ ರೂ. ಗಳನ್ನು ಒದಗಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ 150 ಶಾಲೆಗಳು ನಡೆಯುತ್ತಿವೆ. ಅದರ ಜೊತೆಗೆ 75 ಸರ್ಕಾರಿ ಶಾಲೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ತರಲಾಗುವುದು ಎಂದು ಅವರು ತಿಳಿಸಿದರು.

ಸಂಸತ್ ಸದಸ್ಯರು, ಬೆಂಗಳೂರು ನಗರ ವ್ಯಾಪ್ತಿಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಬೃಹತ್ ಬೆಂಗಳೂರು ಮಹಾ ಪೌರರು, ಉಪ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಂಖ್ಯೆ669/769

## ‘ತಿರುಪತಿ ಬಾಲಾಜಿ ದರ್ಶನ’

ಬೆಂಗಳೂರು, ಜುಲೈ 16 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು (ಕೆಎಸ್‌ಟಿಡಿಸಿ) ರಾಜ್ಯಕ್ಕೆ ಆಗಮಿಸುವ ಪ್ರವಾಸಿಗರಿಗೆ ರಾಜ್ಯ ಹಾಗೂ ಹೊರರಾಜ್ಯದ ವಿವಿಧ ಪ್ರವಾಸಿ ಸ್ಥಳಗಳಿಗೆ ಯೋಜಿತ ಪ್ರವಾಸಗಳನ್ನು ಆಯೋಜಿಸುತ್ತಿದ್ದು, ಈ ಪೈಕಿ **‘ತಿರುಪತಿ ಬಾಲಾಜಿ ದರ್ಶನ’** ಪ್ರವಾಸವು ಅತೀ ಜನಪ್ರಿಯ

ಪ್ರವಾಸಗಳಲ್ಲೊಂದಾಗಿದೆ. ಬೆಂಗಳೂರಿನ ದಕ್ಷಿಣ ಭಾಗದ ಸ್ಥಳಗಳಾದ ಜಯನಗರ, ಜೆ.ಪಿ. ನಗರ, ಬನಶಂಕರಿ, ಬಿ ಟಿ ಎಂ ಲೇಔಟ್ ಪ್ರದೇಶಗಳಿಂದ ಬರುವ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ನಿಗಮವು ಆಗಸ್ಟ್ 1 ರಿಂದ ಜಯನಗರದ 5ನೇ ಬಡಾವಣೆಯ ಜಯನಗರ ದೂರವಾಣಿ ಕೇಂದ್ರದಿಂದ **ತಿರುಪತಿ** ಪ್ರವಾಸವನ್ನು ಪ್ರಾರಂಭಿಸಲಾಗುತ್ತದೆ. ಪ್ರವಾಸದ ದರದ ವಿವರ :

| **ಪ್ರವಾಸ ಆಯೋಜಿಸಲ್ಪಡುವ ದಿನ** | **ವೋಲ್ವೊ ದರ ರೂ./ಒಬ್ಬರಿಗೆ** | **ಮಲ್ಟಿ ಆಕ್ಸೆಲ್ ವೋಲ್ವೊ ದರ/ಒಬ್ಬರಿಗೆ** |
|---|---|---|
| ವಾರದ ದಿನ (ಭಾನುವಾರ–ಗುರುವಾರ) | 1900.00 | 2000.00 |
| ವಾರಾಂತ್ಯ (ಶುಕ್ರವಾರ–ಶನಿವಾರ) | 2000.00 | 2100.00 |

***(ಹಿರಿಯ ನಾಗರಿಕರಿಗೆ ಸದರಿ ಪ್ರವಾಸದ ಸಾರಿಗೆ ವೆಚ್ಚದಲ್ಲಿ ಶೇಕಡಾ 20 ರಷ್ಟು ವಿಶೇಷ ರಿಯಾಯಿತಿ ನೀಡಲಾಗುವುದು)**

ಈ ಪ್ರವಾಸದ ವಾಹನವು ಯಶವಂತಪುರ ಬಸ್ ನಿಲ್ದಾಣದಿಂದ ಸಂಜೆ 07.30ಕ್ಕೆ ಹೊರಟು, ಜಯನಗರ 5ನೇ ಹಂತದಿಂದ ರಾತ್ರಿ 08.30ಕ್ಕೆ ಪ್ರವಾಸವನ್ನು ಆರಂಭಿಸುತ್ತದೆ. ನಂತರ ಕಾರ್ಪೋರೇಷನ್ ವೃತ್ತ, ಗುರುದ್ವಾರ, ಕೆ.ಆರ್. ಪುರಂ ಹಾಗೂ ಹೊಸಕೋಟೆ ಪಿಕ್‌ಅಪ್ ಪಾಯಿಂಟ್‌ಗಳಲ್ಲಿ ಪ್ರವಾಸಿಗರನ್ನು ಕರೆದುಕೊಂಡು, ಮರುದಿನ ಬೆಳಿಗ್ಗೆ 03.00 ಗಂಟೆಗೆ ತಿರುಪತಿ ತಲುಪಲಿದೆ.

ಈ ಪ್ರವಾಸದ ಮುಂಗಡ ಬುಕ್ಕಿಂಗ್ ಹಾಗೂ ಆನ್‌ಲೈನ್ ಬುಕ್ಕಿಂಗ್‌ಗಾಗಿ ಯಶವಂತಪುರದಲ್ಲಿರುವ ನಿಗಮದ ಪ್ರಧಾನ ಬುಕ್ಕಿಂಗ್ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆಯಲು ಕೋರಲಾಗಿದೆ. ಆನ್‌ಲೈನ್ ಬುಕ್ಕಿಂಗ್ ಅಥವಾ ಹೆಚ್ಚಿನ ಮಾಹಿತಿಗಾಗಿ www.kstdc.co ದೂರವಾಣಿ ಸಂಖ್ಯೆ: 080–4334 4334 ಹಾಗೂ 080–4334 4335, ಸಂಚಾರಿ ದೂರವಾಣಿ ಸಂಖ್ಯೆ : 8970650070 ಹಾಗೂ 8970650075 ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಂಖ್ಯೆ670/770

## ಬಾಲ ಭವನದಲ್ಲಿ ಮಕ್ಕಳಿಗಾಗಿ ಪ್ರತಿ ಶನಿವಾರ ಮತ್ತು ಭಾನುವಾರಗಳಂದು ವಾರ್ಷಿಕ ಶಿಬಿರ

ಬೆಂಗಳೂರು, ಜುಲೈ 16 (ಕರ್ನಾಟಕ ವಾರ್ತೆ) :

ಬಾಲ ಭವನವು ಕೇಂದ್ರ ಬಾಲ ಭವನ ಹಾಗೂ ಜಯನಗರ, ರಾಜಾಜಿನಗರ, ಕೋಲ್ಸ್ ಪಾರ್ಕ್, ಮಿನಿ ಬಾಲ ಭವನಗಳಲ್ಲಿ ವಿವಿಧ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ವಾರ್ಷಿಕ ಶಿಬಿರವನ್ನು ದಿನಾಂಕ 04-08-2018 ರಿಂದ ದಿನಾಂಕ: 26-01-2019 ರವರಗೆ ಹಮ್ಮಿಕೊಳ್ಳಲು ಉದ್ದೇಶಿಸಿದೆ.

ಕೇಂದ್ರ ಬಾಲ ಭವನದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಯೋಗ, ಕರಾಟೆ, ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ನೃತ್ಯ, ಸಂಗೀತ ರಂಗ ತರಬೇತಿ, ಯಕ್ಷಗಾನ, ತಬಲ, ಗಿಟಾರ್, ಕೀಬೋರ್ಡ್ ಇತ್ಯಾದಿಗಳಲ್ಲಿ ಹಾಗೂ ಮಿನಿ ಬಾಲ ಭವನಗಳಲ್ಲಿ ಸೋಮವಾರದಿಂದ ಶನಿವಾರದವರೆಗೆ ಯೋಗ, ಕರಾಟೆ, ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ನೃತ್ಯ, ಸಂಗೀತ ಇತ್ಯಾದಿಗಳಲ್ಲಿ ನುರಿತ ಅನುಭವೀ ಬೋಧಕರಿಂದ ತರಬೇತಿ ನೀಡಲಾಗುತ್ತಿದೆ.

ಆಸಕ್ತರು, ಪ್ರವೇಶ ಅರ್ಜಿಗಳನ್ನು ದಿನಾಂಕ: 22-07-2018 ರಿಂದ ಮಧ್ಯಾಹ್ನ 3.00 ರಿಂದ 5.30 ಗಂಟೆವರೆಗೆ ಕೇಂದ್ರ ಬಾಲ ಭವನ, ಕಬ್ಬನ್ ಪಾರ್ಕ್, ಬೆಂಗಳೂರು – 01, ರಾಜಾಜಿನಗರ ಮಿನಿ ಬಾಲ ಭವನ, ಗಾಯಿತ್ರಿ ದೇವಿ ಪಾರ್ಕ್, ಮರಿಯಪ್ಪನಪಾಳ್ಯ, ವರಲಕ್ಷ್ಮಿ ನರ್ಸಿಂಗ್ ಹೋಂ ಎದುರು, ರಾಜಾಜಿನಗರ, ಬೆಂಗಳೂರು – 560 001, ಜಯನಗರ ಮಿನಿ ಬಾಲ ಭವನ, ದೀಪಕ್ ಆಸ್ಪತ್ರೆ ಎದರು, 7ನೇ ಬ್ಲಾಕ್, ಕನಕಪುರ ರಸ್ತೆ, ಜಯನಗರ, ಬೆಂಗಳೂರು ಹಾಗೂ ಕೋಲ್ಸ್‌ಪಾರ್ಕ್ ಮಿನಿ ಬಾಲ ಭವನ, ಕೋಲ್ಸ್ ಪಾರ್ಕ್, ಬೆಂಗಳೂರು ಈ ಮಿನಿ ಬಾಲ ಭವನಗಳಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ ಸೊಸೈಟಿ, ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ. 080 – 22864189 / 22861423 ಮೂಲಕ ಸಂಪರ್ಕಿಸಬಹುದಾಗಿದೆ. ಇಮೇಲ್ email secybalbhavan.bng@gmail.com ಮೂಲಕ ವೀಕ್ಷಿಸಬಹುದಾಗಿದೆ ಎಂದು ಬಾಲ ಭವನ ಪ್ರಕಟಣೆ ತಿಳಿಸಿದೆ.

## ಭ್ರಷ್ಟಾಚಾರ ನಿಗ್ರಹ ದಳ ಸಾರ್ವಜನಿಕ ಸಂಪರ್ಕ ಸಭೆ

ಬೆಂಗಳೂರು, ಜುಲೈ 16 (ಕರ್ನಾಟಕ ವಾರ್ತೆ)

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ವತಿಯಿಂದ ಸಾರ್ವಜನಿಕ ಸಂಪರ್ಕ ಸಭೆಯನ್ನು ದಿನಾಂಕ: 18-07-2018 ರಂದು ಬೆಳಿಗ್ಗೆ 11-00 ಗಂಟೆಯಿಂದ ಮದ್ಯಾಹ್ನ 1-00 ಗಂಟೆಯ ವರೆಗೆ ಈ ಕೆಳಕಂಡ ಕಛೇರಿಗಳಲ್ಲಿ ಆಯೋಜಿಸಲಾಗಿದೆ. ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ಈ ಸಭೆಯಲ್ಲಿ ಹಾಜರಿದ್ದು ಸಾರ್ವಜನಿಕರಿಂದ ಸರ್ಕಾರಿ ಕಛೇರಿ / ಕೆಲಸಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂದಪಟ್ಟ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ. ಸಾರ್ವಜನಿಕರು ಈ ಸಭೆಗೆ ಹಾಜರಾಗಿ ತಮ್ಮ ದೂರುಗಳನ್ನು ನೀಡಬಹುದಾಗಿದೆ.

| ಕ್ರ. ಸಂ | ಸಾರ್ವಜನಿಕ ಸಂಪರ್ಕ ಸಭೆ ನಡೆಯುವ | ಸಭೆಯಲ್ಲಿ ಹಾಜರಿರುವ ಅಧಿಕಾರಿಗಳು | ಮೊಬೈಲ್ ಸಂಖ್ಯೆ |
|---|---|---|---|

| | | | |
|---|---|---|---|
| | ಸ್ಥಳಗಳು. | | |
| 01 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿ. | 1. ಶ್ರೀ ಬಾಲರಾಜು, ಪೊಲೀಸ್ ಉಪಾಧೀಕ್ಷಕರು.<br>2.ಶ್ರೀ ಎಸ್.ಎಂ.ಚಂದ್ರಪ್ಪ, ಪೊಲೀಸ್ ನಿರೀಕ್ಷಕರು, | 94808 06215<br>94808 06262 |
| 02 | ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದ ಕೇಂದ್ರ ಕಛೇರಿ. | 1.ಶ್ರೀ ಶಿವಶಂಕರೆಡ್ಡಿ, ಪೊಲೀಸ್ ಉಪಾಧೀಕ್ಷಕರು.<br>2.ಶ್ರೀ ಸುಬ್ರಮಣ್ಯಸ್ವಾಮಿ, ಪೊಲೀಸ್ ನಿರೀಕ್ಷಕರು | 94808 06213<br>94808 06251 |
| 03 | ಜಿಲ್ಲಾಧಿಕಾರಿಗಳ ಕಛೇರಿ,<br>ಬೆಂಗಳೂರು ನಗರ ಜಿಲ್ಲೆ,<br>ಕಂದಾಯ ಭವನ. | 1.ಶ್ರೀ ವಜೀರ್ ಅಲಿ ಖಾನ್ ಪೊಲೀಸ್ ಉಪಾಧೀಕ್ಷಕರು.<br>2.ಶ್ರೀ ಅನಿಲ್‌ಕುಮಾರ್,ಬಿ.ಎಸ್. ಪೊಲೀಸ್ ನಿರೀಕ್ಷಕರು. | 94808 06212<br>94808 06526 |